ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 18 ಸಾರಿಗೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 15/4/2012

# 8 ದಿನ; 152 ಕೋಟಿ ನಷ್ಟ

## ಹಬ್ಬದ ವೇಳೆಯಲ್ಲೇ ಮುಷ್ಕರದಿಂದ ಲುಕ್ಸಾನು

**ಬೆಂಗಳೂರು:** ಕಳೆದ ಎಂಟು ದಿನಗಳಿಂದ ನಡೆಯುತ್ತಿರುವ ಸಾರಿಗೆ ಮುಷ್ಕರದಿಂದಾಗಿ ರಾಜ್ಯದ ರಸ್ತೆ ಸಾರಿಗೆ ನಿಗಮಗಳಿಗೆ ನೂರಾರು ಕೋಟಿ ರೂ. ನಷ್ಟವಾಗಿದೆ. ಅದರಲ್ಲೂ ಯುಗಾದಿ ಹಬ್ಬದ ವೇಳೆಯಲ್ಲೇ ಈ ಮುಷ್ಕರ ನಡೆದಿರುವುದರಿಂದಾಗಿ 25ರಿಂದ 30 ಕೋಟಿ ರೂ. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ.

4 ನಿಗಮಗಳು ಸೇರಿ ಒಟ್ಟು 152 ಕೋಟಿ ರೂ.ನಷ್ಟವಾಗಿದೆ. ಅಂದರೆ, ದಿನಕ್ಕೆ ಸರಾಸರಿ 19 ಕೋಟಿ ರೂ. ಆದಾಯ ಖೋತಾ ಆಗಿದೆ. ಮುಷ್ಕರ ಇನ್ನಷ್ಟು ದಿನ ನಡೆಯುವ ಸಾಧ್ಯತೆ ಇದ್ದು ನಷ್ಟದ ಪ್ರಮಾಣ ಇನ್ನಷ್ಟು ಹಿಗ್ಗುವ ಸಾಧ್ಯತೆ ಇದೆ.

**60 ಬಸ್‌ಗಳಿಗೆ ಹಾನಿ:** ಆದಾಯ ನಷ್ಟದ ಜತೆಗೆ ಕೆಎಸ್‌ಆರ್‌ಟಿಸಿಯ 34, ಬಿಎಂಟಿಸಿಯ 3, ಈಶಾನ್ಯ ಸಾರಿಗೆಯ 20 ಮತ್ತು ವಾಯವ್ಯ ಸಾರಿಗೆಯ 3 ಸೇರಿ 60 ಬಸ್‌ಗಳಿಗೆ ಹಾನಿಯಾಗಿದೆ. ಇವರಲ್ಲಿ ವೋಲ್ವೊ ವಾಹನಗಳೂ ಸೇರಿವೆ.

### ಯಾವುದಕ್ಕೆ ಎಷ್ಟು ನಷ್ಟ?

**70** ಕೋಟಿ ರೂ. ಕೆಎಸ್‌ಆರ್‌ಟಿಸಿ

**20** ಕೋಟಿ ರೂ. ಬಿಎಂಟಿಸಿ

**30.5** ಕೋಟಿ ರೂ. ವಾಯುವ್ಯ ಸಾರಿಗೆ

**31.5** ಕೋಟಿ ರೂ. ಈಶಾನ್ಯ ಸಾರಿಗೆ

**ಅನೇಕ ನೌಕರರು ಮುಷ್ಕರದಿಂದ ಬೇಸತ್ತಿರುವುದಾಗಿ ತಿಳಿಸಿದ್ದಾರೆ. ಆದಾಗ್ಯೂ ಕೆಲ ಪಟ್ಟಭದ್ರರು ವಿನಾಕಾರಣ ತೊಂದರೆ ನೀಡುತ್ತಿದ್ದಾರೆ.**

• **ಲಕ್ಷ್ಮಣ ಸವದಿ,** ಸಾರಿಗೆ ಸಚಿವ

### ಇಂದು-ನಾಳೆ ಹೋರಾಟ ತೀವ್ರ

ರಾಜ್ಯ ಸರ್ಕಾರಿ ನೌಕರರ ಕೂಟವು ಗುರುವಾರ ತನ್ನ ಹೋರಾಟ ತೀವ್ರಗೊಳಿಸಲು ನಿರ್ಧರಿಸಿದೆ. ಕ್ಯಾಂಡಲ್ ಹಿಡಿದು ಪ್ರತಿಭಟನೆ, ಶಾಸಕರ ಮನೆಗಳ ಮುಂದೆ ಧರಣಿಗೆ ಮುಂದಾಗಿದೆ. ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಈ ಮಾಹಿತಿ ನೀಡಿದ್ದಾರೆ. 16ರಂದು ಎಲ್ಲ ಶಾಸಕರ ಮನೆಗಳ ಮುಂದೆ ಧರಣಿ ನಡೆಸಲಾಗುವುದು ಎಂದರು.